ಓ ಎಸ್ ನಂ.109/2023

ಡಿ.ಡಬ್ಲ್ಯೂ-1 ಉಮಾದೇವಿ ಗಂಡ ಬಸವಣ್ಣಯ್ಯ ಹಿರೆಮಠ

(ಇಂದು ದಿನಾಂಕಃ **06-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ನಮಗೆ ನಮ್ಮ ತಾಯಿ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುವ ಆಸ್ತಿಗಳು ನಮ್ಮ ತಂದೆಯಿಂದಲೆ ಬಂದ ಆಸ್ತಿಗಳಾಗಿರುತ್ತವೆ. ನಮ್ಮ ತಾಯಿ ಹಿರಿಯರಿಂದ ಬಂದ ಆಸ್ತಿಗಳನ್ನು ಮಾರಾಟ ಮಾಡಿ, ನನ್ನ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯೇ ತನ್ನ ಮಕ್ಕಳ ಹೆಸರಿನಲ್ಲಿ ಇದ್ದ ಜಮೀನುಗಳನ್ನು ಮಾರಾಟ ಮಾಡಿ, ನಮ್ಮ ಮದುವೆಯ ಸಾಲ ತೀರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಮ್ಮಂದಿರೆ ಆಸ್ತಿಯನ್ನು ಮಾರಾಟ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ನಿಮ್ಮ ಹೆಸರಿನಲ್ಲಿರುವ ಆಸ್ತಿಯನ್ನು ಹೆಣ್ಣುಮಕ್ಕಳ ಮದುವೆಯ ಸಾಲ ತೀರಿಸಲು ಮಾರಾಟ ಮಾಡುವಂತೆ ಮತ್ತು ತನ್ನ ಹೆಸರಿನಲ್ಲಿದ್ದ ಆಸ್ತಿಯನ್ನು ನೀವು ಹಂಚಿಕೊಳ್ಳಿ ಎಂದು ನಮ್ಮ ತಾಯಿ ನನ್ನ ಸಹೋದರರಿಗೆ ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ಸಹೋದರರಿಗೆ ಯಾವುದೆ ಹಣದ ಅಡಚಣೆ ಇರಲಿಲ್ಲ, ಅವರು ನಮ್ಮ ಮದುವೆಗೆ ಮಾಡಿದ ಸಾಲವನ್ನು ತೀರಿಸುವ ಸಲುವಾಗಿಯೆ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

೨. ನಮ್ಮ ತಾಯಿ ಅಸ್ವಸ್ಥ ಇದ್ದಾಗ ನಾವು ಖೊಟ್ಟಿ ರೀತಿಯಿಂದ ಮೃತ್ಯುಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿಗಳು ನಮ್ಮ ಅಜ್ಜನಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಅವು ನಮ್ಮ ತಂದೆಯ ಆಸ್ತಿಗಳಾಗಿರುತ್ತವೆ ಎನ್ನುತ್ತಾರೆ. ನಮ್ಮ ತಂದೆಯ ಆಸ್ತಿಯಲ್ಲಿ ಪಾಲು ಬೇಕು ಎಂದು ಈ ಮೊದಲು ನಾನು ಯಾವುದೆ ದಾವೆ

ಹೂಡಿರುವುದಿಲ್ಲ. ನೀವು ಆಸ್ತಿಯಲ್ಲಿ ಪಾಲು ಕೇಳಬಹುದಿತ್ತಲ್ಲಾ ಎಂದರೆ ಸಾಕ್ಷಿಯು ನಮ್ಮ ತಾಯಿಯೆ ಕುಳಿತು ನಮಗೆ ಆಸ್ತಿ ಮಾಡಿದ್ದರಿಂದ ನಾವು ಪಾಲು ಕೇಳಿ ದಾವೆ ಹಾಕಿಲ್ಲ ಎನ್ನುತ್ತಾರೆ. ನಮ್ಮ ತಾಯಿಯ ಹೆಸರಿನಲ್ಲಿ ಇದ್ದ ಜಮೀನು ಅತ್ಯಂತ ಫಲವತ್ತಾದ ಜಮೀನು ಎಂದರೆ ಸರಿ. ಫಲವತ್ತಾಗಿ ಇಲ್ಲದ ಜಮೀನುಗಳನ್ನು ನಮ್ಮ ಮದುವೆಯ ಸಾಲಕ್ಕಾಗಿ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಫಲವತ್ತಾದ ಜಮೀನಿನಲ್ಲಿ ಪಾಲು ತೆಗೆದುಕೊಳ್ಳಿ ಎಂದು ನಮ್ಮ ತಾಯಿ ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಈಗ ಮೊದಲು ಹಾಕಿದ ದಾವೆ ಕೂಡಾ ವಜಾಗೊಂಡಿದೆ ಎನ್ನುತ್ತಾರೆ. ನಾನು ಸತ್ಯವನ್ನು ಮುಚ್ಚಿಟ್ಟು, ಒಂದು ಸುಳ್ಳೂ ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

೧೪ನೇ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.